‘ಟಾರ್’ ಹಾಕಿಸಿ ತಾವು ಮತ–ಮನ ಸೆಳೆವ ಹುನ್ನಾರ ಸ್ವಾಸಕರದ್ದು, ಅವರು ತಮ್ಮನ್ನು ತಾವು ಎಂದೂ ಶಾಸಕರೆಂದು ಕರೆದುಕೊಂಡವರೇ ಅಲ್ಲ. ಸ್ವಾಸಕರು ಅಂತಿದ್ದರು. ಅದು ಹುಟ್ಟಿನಿಂದ ಬಂದ ದೋಷವಿದೀತು ಬಿಡಿ. ಈವಯ್ಯನೇ ಜೆಸಿಬಿ ಮಾಲಿಂಗನ್ನ ಮೊಬ್ಬಳ್ಳಿಗೆ ಕಳಿಸಿದ ಮಹಾನುಭಾವ.

ಜೆಸಿಬಿ ಅನ್ನೋದು ಕ್ವಾಲಿಫಿಕೇಶನ್ನಲ್ಲ. ಅದು ತತ್ರಾಪಿ ಮಿಶಿನ್ನು. ಮಿಶಿನ್ ಅಂದ್ರೆ ಭಾರಿ ಮಿಶಿನ್ನೇ, ರಸ್ತೇನೆ ಅಗೆದು ಬಿಸಾಡಿ ‘ಸಮ’ ಮಾಡೋ ತಾಕತ್ತಿರೋ ಯಂತ್ರ! ಅಂತಹ ಯಂತ್ರನಾ ದಿನಾ ಹತ್ತಿ ಇಳಿವ, ತಾನು ಹೇಳಿದಂತೆ ಕೇಳುವಂತೆ ಮಾಡ್ಕೊಂಡು ಓಡಿಸುವ ಹೈದ ಮಾಲಿಂಗ. ಗಡ ಚಿಕ್ಕವ, ಕಿವಿ ತಮಟೆ ಹರಿಯುವಷ್ಟು ಸವಂಡು ಮಾಡುವ ಯಂತ್ರದ ಸವಾರಿ ಮಾಡ್ತಾ ಖುಷಿ ಖುಷಿಯಾಗಿರುವ ಅವನು ಹಳ್ಳಿಗರ ಪಾಲಿನ ಶೇಷಶಯನ ವಿಷ್ಣುವಿನಂತೆ ಭಾಸ. ಅವನ ಹೈಟು ವೆಯಿಟು ಎಣ್ಣೆಗೆಂಪ ಫೇಸು, ಸದೃಢ ಮೈಕಟ್ಟು, ಗುಂಗುರು ಕ್ರಾಪ್‌ಕಟ್ಟು. ಜೀನ್ಸ್ ಇಜಾರ ಮ್ಯಾಕೊಂದು ಗಿಡಗನ ಚಿತ್ರ ಇರೋ ಟೀಶಲ್ಟು, ಕಾಲಿಗೆ ಬೂಟು, ಬೊಳ್ಳಿಗೊಂದು ಬೆಳ್ಳಿ ಬಣ್ಣದ ಉಂಗುರ, ಕೈಗೊಂದು ಗೋಲ್ಡು ಕಲರ್ ವಾಚು, ಎಲ್ಲವೂ ಹಳ್ಳಿಗರನ್ನು ಮರುಳು ಮಾಡಿದ್ದಕ್ಕಿಂತಲೂ ಅವನ ಹರಕು ಮುರುಕು ಇಂಗ್ಲೀಸಂತೂ ಅವನ ತೂಕ ಡಬಲ್ ಮಾಡಿದ್ದಂತೂ ದಿಟ. ಇಂತಹ ದುಡಿಮೆಗಾರ ಸಿಕ್ಕಾಗ ಹೆಣ್ಣು ಇರೋ ಮನೆಮಂದಿ ಇವನು ನಮ್ಮನಾದ್ರೆ ಒಂದು ಕೈ ನೋಡ್ಕೊಬಾರದೇಕೆ ಅಂದ್ಕೊಂಡ್ರೆ ತಪ್ಪೇನೈತೆ?

ಊರಗೌಡರ ಹೆಂಡ್ರ ತಂಗಿಗೆ, ಮೂವತ್ತಾದ್ರೂ ಮದುವೆಯಾಗಿರಲಿಲ್ಲವಾಗಿ, ಒಂದಿನ ಗೌಡ್ತಿ ಗೌಡನ ತಲೆ ತಿಂದಳು. ಮಾಲಿಂಗ ಅಂದ್ಮೇಲೆ ನಮ್ಮೋನೇ ಇದ್ದಾನಂತ ಒಂದಿನ ತಾವೇ ಮಾತಾಡಿಸಿದ್ರು. ಯಾಕಂದ್ರೆ ಮಾಲಿಂಗಾತು ಅವನ ಕೆಲಸವಾತು ಅನ್ನಂಗಿದ್ದ ಹುಡುಗ. ಯಾರಿಗೂ ಸಲಾಮು ಇಕ್ಕೋನಲ್ಲ. ಮಾತೂ ಆಡಿಸೋನಲ್ಲ. ಬೆಳಗಾನೆ ಬಂದು ಜೆಸಿಬಿ ಏರಿದ ಅಂದ್ರೆ ರಸ್ತೆ ಜೊತೆ ಫೈಟು. ಮಧ್ಯಾನದ ಹೊತ್ತಿಗೆ ಲಕ್ಷ್ಮೀನಾರಾಯಣಸ್ವಾಮಿ ಗುಡಿತಾವ ಹೋಗಿ ಪಗಾರದಾಗೆ ಕೂತು ತಾನು ತಂದಿದ್ದ ಬುತ್ತಿ ತಿಂದು ಬಾಟ್ಲಿ ನೀರು ಕುಡ್ದು ಜೆಸಿಬಿ ಏರಿದ ಅಂದ್ರೆ, ಹೊತ್ತು ಇಳಿಯೋ ಹೊತ್ತಿಗೆ ಯಂತ್ರ ಇದ್ದಲ್ಲೇ ನಿಲ್ಲಿಸಿ ಸಂಜೆ ಬರೋ ಬಸ್ ಹತ್ತಿ ಹೊಂಟುಹೋದೋನು ಮತ್ತೆ ಬೆಳಗಾಗ್ಲೇ ಅದೇ ಬಸ್ಸಿಂದ ಇಳಿಯೋನು. ಮೊದಲು ಅವನ್ನ ಮಾತಾಡಿಸಿದ್ದೇ ಕುರುಬರ ನಾಗಣ್ಣ. ‘ಏನಣ್ಣಾ ಹೆಸರು?’ ಅಂತ ಕೇಳಿದ್ರೆ ಅವನೂ ‘ನಿಂದೇನಣ್ಣ ಹೆಸರು?’ ಅಂತ ಕೇಳಿದಾಗ ನಾಗಣ್ಣ ಬುಸುಗುಟ್ಟದೆ ತನ್ನ ಹೆಸರು, ಕೂನುಕುರ್ತ, ತನ್ನ ಸಿರಿಸಂಪತ್ತು, ತನಗಿರೋ ಒಬ್ಬಳೇ ಪಿಯುಸಿ ಫೇಲಾದ ಮಗಳ ಬಗ್ಗೆ ಅನವಶ್ಯಕವಾಗಿ ವರ್ಣನಾ ಮಾಡಿ, ‘ಬಾರ್ಲಾ ಅದೇನು ಒಣಗಿದ ಪೆಂಡೆ ಕಟ್ಟಿದ ಬುತ್ತಿ ಉಂಡಿ? ಬಾ ಬಾಡು ಮಾಡಿಸಿವ್ನಿ’ ಅಂದ. ಆತೇಳು ಅಂದೋನು ಜೆಸಿಬಿಯಿಂದ ಇಳಿಲೇ ಇಲ್ಲ. ನಾಗಣ್ಣನೀಗ ಬುಸುಗುಟ್ಟಿದ, ಊರಿನ ದೊಡ್ಡಮನುಷ್ಯ ನಾನು, ನನ್ನ ಮಾತಿಗೆ ಕಿಮ್ಮತ್ತು ಇಲ್ವಾ? ಅಂದ. ‘ನಂದು ಕೆಲ್ಸ ಮೊದ್ಲು. ಟೈಂ ಸಿಕ್ಕರೆ ಊಟ, ಇಲ್ಲದಿದ್ದರೆ ಅದೇ ಬುತ್ತಿ ಹೊಯ್ದು ಮನೆಯಾಗೆ ತಿಂತೀನಿ’ ಅಂದುಬಿಟ್ಟ ಮಾಲಿಂಗ. ‘ಅಯ್ಯೊ ಗತಿಗೇಡಿ’ ಅಂತ ಮನದಾಗೆ ನಕ್ಕು ಇನ್ನೊಂದೆರಡು ದಪ ಟ್ರೈ ಮಾಡಿ ಸುಮ್ಮಗಾಗಿದ್ದ. ಗೊಲ್ಲರ ಕಿಟ್ಟಪ್ಪನೂ ಒಮ್ಮೆ ಉಂಬಾಕೆ ಕರೆದಿದ್ದ. ‘ಬಿಸಿಲಾಗೇನು ಒಣ ಬುತ್ತಿ ತಿಂತಿ ಮಾಲಿಂಗಣ್ಣ. ನಮ್ಮ ಮನಿಗೆ ಮಧ್ಯಾನ ಬಂದು ಬಿಡು. ಜೊತಿನಾಗೆ ಉಂಬೋಣ’ವೆಂದು ಗೌರವಾದರ ತೋರಿದರೂ ಮಾಲಿಂಗ ಅಷ್ಟು ಸುಲಭವಾಗಿ ಬೇಸ್ತು ಬೀಳೋನಲ್ಲ. ಮುಖ್ಯವಾಗಿ ಯಾರದಾರ ಹಂಗು ತನಗೇಕೆ ಅಂಬೋ ಮನೋಭಾವದವನು. ‘ಈ ನನ್ಮಗನಿಗೆ ಬಲು ದುರಂಕಾರವೈತೆ. ಮಣ್ಣು ಹೆಂಡೆ ಒಡೆದು ನೆಲ ಸಮ ಮಾಡೋಕೇ ಸರಿ. ಇವನೋ ಇವನ ಇಂಗ್ಲೀಸೋ!’ ಎಂದು ಆಡಿಕೊಳ್ಳೋರ ಸಂಖ್ಯೆ ದ್ವಿಗುಣಿಸಿತ್ತು.

ಯಾರು ಕರೆದ್ರೂ ಬರುವಲ್ಲ! ಇವನು ದೊಡ್ಡ ಜಾತಿಯೋನೆ ಇದ್ದಾನೆಂದು ಹಳ್ಳಿಯೋರು ಹಿಡಿಶಾಪ ಹಾಕೋವಾಗ್ಲೇ ಲಿಂಗಾಯಿತ ಗೌಡ, ತನ್ನ ಗೌಡತಿ ಮಾತು ಮೀರದೆ ತಾನೂ ಒಂದು ಏಟು ಹಾಕಿದ. ‘ಮಾಲಿಂಗ ಉಂಡೇನಪ್ಪಾ?’ ಇವನಿಗೋ ಕೇಳದು, ಗಾಡಿ ನಿಲ್ಲಿಸಿ ಗೌಡರಿಗೆ ಗೌರವ ತೋರಿದ. ‘ಯಪ್ಪಾ ಈಗ ಹೊಂಟೇನಿ’ ಅಂದ. ‘ಗುಡಿನಾಗ್ಯ ಪಾಗರವೂ ಝಳ ಹೊಡಿತದೆ, ಒಣ ಬುತ್ತಿ ಏನ್ ಉಂಡಿಯೋ... ನಮ್ಮ ಮನೆಯಾಗ ಹುಗ್ಗಿ ಮಾಡ್ಸೀವ್ನಿ ಉಣ್ಣೋವಂತೆ ಬಾ’ ಅಂದರು. ‘ಆತೇಳ್ರಿ, ನೀವು ಹೋಗ್ರಿ, ಹಿಂದಾಗಡೇನೆ ಬರ್ತೀನಿ’ ಮಾಲಿಂಗಂದ. ಇವನು ಬರೋನಲ್ಲ ಅನ್ನೋದನ್ನು ಕೇಳಿದ್ದ ಗೌಡ ‘ಕರಿತಿರೋದು ಯಾರೋ ಅರಿವುಗೇಡಿ. ನಿನ್ನ ಕಳಿಸಿರೋ ಎಂಎಲ್‌ಎನೇ ನನ್ನ ಮಾತಿಗೆ ಎದುರಾಡೋಲ್ಲ’ ಎಂದು ಸಣ್ಣಗೆ ಗದರಿದ.

‘ಸಾರಿ ಕಣ್ರಿ. ನಂದು ಕಾಯಕವೇ ಕೈಲಾಸ. ವರ್ಕ್ ಈಸ್ ವರ್ಶಿಪ್... ಕೆಲಸ ಮುಗಿಸಿ ಬಂದಿನೇಳ್ರಿ’ ಅಂದು ಸಮಯಪ್ರಜ್ಞೆ ತೋರಿದ. ಗೌಡ ಕಾದಿದ್ದೇ ಬಂತು. ಇವನು ಬುತ್ತಿ ಮೇಲೂ ಮೊಬ್ಬಳ್ಳಿ ಮಂದಿ ಕಣ್ಣು ಹಾಕದೆ ಬಿಟ್ಟವರಲ್ಲ. ಏನ್ ತಂದಿದ್ದಾನು? ಎಲ್ಡು ರೊಟ್ಟಿ ಉಳ್ಳಾಗಡ್ಡಿ ಹಸರುಗಾಯಿ ತಂದಿದ್ದಾನು. ಇಲ್ಲವೆ ಮುದ್ದೆ ಚಟ್ನೆ ತಂದಿದ್ದಾನು ಅಂದ್ಕೊಂಡ್ರೆ ಇಂವಾ ದಿನಾ ಮೊಸರನ್ನದ ಬುತ್ತಿನೇ ತರೋದು ನೋಡಿ, ಇಂವಾ ಏನು ಜುಜಬಿ ಮನುಷ್ಯ ಅಲ್ಲ. ಒಂದು ಲೆವೆಲ್ಲಿಗೆ ಇದ್ದಂತಾನೆ ಅಂದುಕೊಂಡ ಮೇಲಂತೂ ನಾಯಕರ ಬೋರಲಿಂಗನೂ ಟವೆಲ್ ಹಾಕಿ ಉರ್ಕೊಂಡಿದ್ದ. ಹಂಗಾರೆ ಇಂವಾ ಯಾವ ಮತಸ್ಥನೆಂಬ ಒಳಗುದಿ ಸರ್ವರಲ್ಲಿಯೂ ಕೊತಕೊತ.

ಮಾಲಿಂಗನಿಗಾಗಿ ಕಾದ ಗೌಡರೂ ಎಲ್ಲರಂಗೆ ಸುಮ್ನೆ ಬಿಟ್ಟಾರೆ. ಜೆಸಿಬಿತಾವೆ ಬಂದರು. ‘ಏನ್ಲಾ ಮಾಲಿಂಗ, ಯಾಕ್ಲಾ ಬರಲಿಲ್ಲ? ಸುಮ್ನೆ ಕಾಯಿಸಿದೆಲ್ಲೋ? ಎಷ್ಟೋ ಕೊಬ್ಬು ನಿನ್ಗೆ?’ ಅಂದರು. ‘ಸಾರಿ ಕಣ್ಸಾಮಿ. ನಿಮ್ದು ದೊಡ್ಡ ಕ್ಯಾಸ್ಟು. ನಾವು ನಿಮ್ಮ ಸರಿಸಮಾನ ಕುಂತು ಉಂಡ್ರೆ ಸಿವಾ ಮೆಚ್ಚಾನ್ಯೇ...’ ಅಂತ ಮಾಲಿಂಗ ಹಿಡಿಯಪ್ಪಾದ. ಗೌಡರು ‘ಹಂಗೇನು’ ಅಂತ ಕ್ಷಮಿಸಿಬಿಟ್ಟರಾದರೂ, ‘ಹಂಗಾರೆ ನಿಂದು ಯಾವ ಜಾತಿ’ ಅಂತ ಕೇಳಲು ಬಸವಣ್ಣನ ವಚನ ಅಡ್ಡ ಬಂದು ಸುಮ್ಮಾದರು. ಇವಂದು ದೊಡ್ಡ ಜಾತಿಮೇನಲ್ಲ ಅಂತ ಒಂತರಾ ಎಲ್ಲರಿಗೂ ನೆಮ್ಮದಿ. ಶಾನುಭೋಗರಂತೂ ಇವನ್ನ ಕಿರುಕಣ್ಣಲ್ಲೂ ನೋಡಿದವರಲ್ಲ. ‘ಮೂವತ್ತಾರು ಮೀರಿದ ಮಗಳಿದ್ದಾಳೆ ಅಂತ ಯಾವನಿಗೋ ಕಟ್ಟೋಕೆ ಆದ್ದೀತಾ? ಇಂತಹ ರೂಲ್ಸು ರೆಗಿಲೇಶನ್ನೂ ಇರೋ ಜಾತಿನಾಗ್ಯಾಕೆ ನನ್ನ ಹುಟ್ಟಿಸಿದೆಯೋ ಪಾಪಿ ಭಗವಂತ’ ಅಂತ ಭಗವಂತನಿಗೆ ಪೂಜೆ ಮಾಡೋವಾಗಲೆಲ್ಲಾ ಮಂತ್ರದ ಜೊತೆಗೆ ಶಾಪವೂ ಹಾಕಿದರು. ಗುಡಿನಾಗೆ ತಣ್ಣಗೆ ನಿಂತಿರೋ ಲಕ್ಷ್ಮೀನಾರಾಯಣ ಹರ ಅನ್ನಲಿಲ್ಲ, ಶಿವ ಅನ್ನಲಿಲ್ಲ. ಇನ್ನೊಂದೆರಡು ಮೂರು ದಿನದಾಗೆ ಕೆಲಸ ಫಿನಿಶ್ ಆದ ಮೇಲೆ ರಸ್ತೆ ಮಾಡಿ ಟಾರ್ ಹಾಕೋರು ಬರ್ತಾರೆ ಅಂತ ಮಾಲಿಂಗ ಅನ್ನೋವಾಗ ಇಡೀ ಮೊಬ್ಬಳ್ಳಿಯೇ ಮಂಕಾತು. ಇವನಿಗೆ ‘ಕ್ಯಾರೆ’ ಅನ್ನದವರೆಂದರೆ ಕೆಳಹಟ್ಟಿ ಜನ.

***

ಒಂದಿನ ಮಾಲಿಂಗನ ಜಾತಿ ಬಯಲಿಗೆ ಬೀಳೋ ಸಮಯವೂ ಬಂತು. ಅವನ ವಯಸ್ಸಾದ ತಾಯಿ ಕಾಯಿಲೆ ಬಿದ್ದು ಬುತ್ತಿಯ ಕಟ್ಟೆ ಕೊಡದಿದ್ದಾಗ, ಮಧ್ಯಾಹ್ನ ಗಾಡಿ ನಿಲ್ಲಿಸಿದ ಮಾಲಿಂಗ ಊರ ಹೊರಗಿದ್ದ ಬಡಾಖೋಪ್ ಮಾಡೋ ತಡಿಕೆ ಹೋಟ್ಲಿಗೆ ಹೋದದ್ದನ್ನು ನೋಡಿ ಹಳ್ಳಿಗೆ ಹಳ್ಳಿಯೇ ಬೆರಗಾತು. ಕಾರಣ, ಅದು ದನದ ಮಾಂಸದ ಅಡಿಗೆ ಮಾಡೋ ಅಗದಿ ಫೇಮಸ್ ಹೋಟ್ಲು. ಸುತ್ತಾಮುತ್ತಲ ಹಳ್ಳಿಯ ದಿಲ್‌ದಾರರುಗಳೇ ಸಾಮಾನ್ಯವಾಗಿ ಗಿರಾಕಿಗಳು. ಕಾಸಿದ್ದಾಗ ಕೆಳಹಟ್ಟಿಯೋರೂ ಹೋಗೋರು. ಹೋಟೆಲ್ ಇಟ್ಟವನೊಬ್ಬ ಮಲೆಯಾಳಿ. ವಿಷಯ ತಿಳಿದು ಅರ್ಧ ಊರೇ ಸೇರಿತು. ಮಾಲಿಂಗ ಪುನಃ ಡ್ಯೂಟಿಗೆ ಬಂದಾಗ ಗೌಡರೆ ಗಟ್ಟಿಸಿಕೇಳಿದರು. ‘ಬ್ಯಾವರ್ಸಿ, ದನ ತಿನ್ನೋಕೆ ಹೋಗಿದ್ದೇನಾ? ಯಾವ ಜಾತಿನ್ಲಾ ನಿಂದು ಹೈವಾನ್?’

ಮಾಲಿಂಗ ಸಣ್ಣಗೆ ನಕ್ಕ. ‘ನಾನು ಎಸ್ಸಿ ಸ್ವಾಮಿ... ಯಾಕೆ? ಹೆಣ್ಣು ಕೊಡಬೇಕಂತಿದ್ದಿರೇನು?’ ಎಂದು ಕಿಚಾಯಿಸಿದ. ‘ಲೋಫರ್, ನಮ್ಮ ಗುಡೀನೆಲ್ಲಾ ಅಶುಚಿ ಮಾಡಿದೆಯೆಲ್ಲೋ ಪಾಪಿ ನನ್‌ಮಗ್ನೆ’ ಎಂದು ತಮ್ಮ ಊರುಗೋಲಿನಿಂದ ಮಾಲಿಂಗ ಅಲ್ಲಿಟ್ಟಿದ್ದ ಬ್ಯಾಗನ್ನು ಪಗಾರದಿಂದಾಚೆಗೆ ತಳ್ಳಿ ಆಕ್ರೋಶ ತೋರಿದರು. ‘ನಡಿ ಆಚೆಗೆ. ಇನ್ನೊಂದ್ಸಲ ಈ ಗುಡಿ ಆಸುಪಾಸು ಕಂಡ್ಯೋ ಕತ್ತರಿಸಿ ಬಿಡ್ತೀನಿ ನಿನ್ನಾ’ ಶಾನುಭೋಗರ ಅಹಂ.

ಇದನ್ನೆಲ್ಲಾ ಕೆಳಹಟ್ಟಿ ಜನ ನಿಂತು ನೋಡಿತು. ‘ನೋಡ್ರಿ, ದೇವರು ಎಲ್ಲರಿಗೂ ಸೇರಿದೋನು. ಈ ಗುಡಿ ಕಟ್ಟುವಾಗ ನಾವು ಕೈಲಾದ ದೇಣಿಗೆ ಕೊಟ್ಟೇವಿ. ನಾವು ಮನುಷರೆಯಾ... ಮಾಲಿಂಗೇನು ಗುಡಿ ಒಳಾಗೆ ಎಂದಾರ ಬಂದಾನೇನು?’ ಕೆಳಹಟ್ಟಿ ಯಜಮಾನ ಅಸ್ರಜ್ಞ ಕುಪಿತನಾದ.

ಮಂದಿ ಸೇರಿತು. ‘ಇವಂತಾವೇನು ಮಾತು. ಗುಡಿಶುದ್ಧ ಮಾಡ್ರಿ ಮೊದ್ಲು, ನಾಳೆಯಿಂದ ನೀನು ಊರ್ನಾಗೆ ಬಂದ್‌ಗಿಂದಿಯಾ ಕಟ್ಟಲೆಗಂಟು